# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## ಎಸ್.ಸಿ ಸಂಖ್ಯೆ:- 105/2025

| | | |
|---|---|---|
| **ಸಾಕ್ಷಿದಾರನ ಹೆಸರು** | : ಸಮೀನಾ | ಪಿ.ಡಬ್ಲ್ಯೂ:- 8 |
| **ಗಂಡನ ಹೆಸರು** | : ಜಾವಿದ್ | ಸಿ.ಡಬ್ಲ್ಯೂ:- 13 |
| **ವಯಸ್ಸು** | : 35 ವರ್ಷ | |
| **ಉದ್ಯೋಗ** | : ಆಸ್ಪತ್ರೆಯಲ್ಲಿ ಹೌಸ್ ಕೀಪಿಂಗ್ ಕೆಲಸ | |
| **ವಾಸಸ್ಥಳ** | : ಮೈಸೂರು. | |

**ಸಾಕ್ಷಿಯನ್ನು ಈ ದಿನ ದಿ:25.07.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದ:-**

**1.** ಮೈಸೂರಿನ ಕಲ್ಯಾಣ ಗಿರಿಯ ಕೆಸಿಬಿ ಸ್ಲಂ ಕ್ವಾಟ್ರಸ್ ನಲ್ಲಿ ವಾಸವಿದ್ದೇನೆ. ಮೃತ ಮುದಸಿರ್ ನ ಪರಿಚಯ ಇದೆ. ಮೃತ ಮುದಸಿರ್ ಗಾರೆ ಕೆಲಸ ಮಾಡಿ, ನಮ್ಮ ಮನೆ ಬಳಿ ಇರುವ ಸಮುದಾಯ ಭವನದಲ್ಲಿ ಉಳಿದುಕೊಳ್ಳುತ್ತಿದ್ದ. ಮೃತ ಮುದಸಿರ್ ಮದ್ಯಪಾನ ಮಾಡುತ್ತಿದ್ದ. ಹೊಟೇಲಿನಿಂದ ಊಟ ತಂದು ಊಟ ಮಾಡುತ್ತಿದ್ದ.

**2.** ಈಗ್ಗೆ ಅಂದಾಜು 3 ವರ್ಷಗಳ ಹಿಂದೆ ಒಂದು ದಿನ ನಾನು ಬೆಂಗಳೂರಿಗೆ ಹೋಗಿದ್ದಾಗ, ನಮ್ಮ ಪಕ್ಕದ ಮನೆಯವರು ಫೋನ್ ಮಾಡಿ ಮುದಸೀರ್ ನ ಕೊಲೆ ಆಗಿದೆ ಎಂದು ಹೇಳಿದರು. ಆ ಕಾಲಕ್ಕೆ ನಾನು ನಮ್ಮ ಮನೆ ಬಳಿ ಬಂದಾಗ ಪೊಲೀಸರು ಸಮುದಾಯ ಭವನದ ಬಳಿ ಸೇರಿದ್ದರು. ಆ ಕಾಲಕ್ಕೆ ಮುದಾಸಿರ್ ನ ಕೊಲೆ ಆಗಿತ್ತು ಎಂದು ಗೊತ್ತಾಗಿತ್ತು. ಆದರೆ ಯಾರು ಮಾಡಿದ್ದರು ಎಂದು ಗೊತ್ತಾಗಲಿಲ್ಲ. ನನಗೆ ಆರೋಪಿತನ

ಪರಿಚಯ ಅಷ್ಟಾಗಿ ಇಲ್ಲ. ನಾನು ಆರೋಪಿತನನ್ನು ಮುದಾಸಿರ್ ನ ಜೊತೆ ಯಾವತ್ತೂ ನೋಡಿಲ್ಲ.

**3.** ಮುದಾಸಿರ್ ನ ಕೊಲೆ ಆಗಿದ್ದ ದಿನ ಸಂಜೆ ಪೊಲೀಸರು ಆರೋಪಿತನನ್ನು ಸಮುದಾಯ ಭವನಕ್ಕೆ ಕರೆದುಕೊಂಡು ಬಂದಾಗ ನೋಡಿದ್ದೆ. ಆದರೆ ಆ ಕಾಲಕ್ಕೆ ಯಾರು ಕೊಲೆ ಮಾಡಿದ್ದಾರೆ ಎಂದು ಗೊತ್ತಾಗಲಿಲ್ಲ. ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**4.** ಕೋರ್ಟ ಮುಂದಿರುವ ಆರೋಪಿ ಮುದಾಸಿರ್ ನ ಜೊತೆ ಸಮುದಾಯದ ಬಳಿ ಆಗಾಗ ಬರುತ್ತಿದ್ದ ಎಂದರೆ ನಾನು ನೋಡಿಲ್ಲ. ದಿಃ– 06.12.2024 ರಂದು ನಾನು ಮನೆಯಲ್ಲಿದ್ದಾಗ, ಆರೋಪಿತ ಮತ್ತು ಮುದಾಸಿರ್ ಹಣದ ವಿಚಾರಕ್ಕೆ ಜಗಳ ಮಾಡುತ್ತಿದ್ದಾಗ, ಅಲ್ಲಿದ್ದ ಜನರು ಅವರನ್ನು ಬೈದು ಕಳುಹಿಸಿದಾಗ ಅವರಿಬ್ಬರು ಸಮುದಾಯ ಭವನದ ಒಳಗೆ ಹೋಗಿದ್ದರು ಎಂದರೆ ಸರಿಯಲ್ಲ. ನಂತರ ಮರುದಿನ ನಾನು ಎದ್ದು ನೋಡಿದಾಗ ಸಮುದಾಯದ ಭವನ ಬಳಿ ಜನ ಸೇರಿದ್ದು, ನಾನು ಅಲ್ಲಿಗೆ ಹೋಗಿದ್ದಾಗ, ಮುದಾಸಿರ್ ನ ತಲೆ, ಮುಖ, ಅವನ ಚಾಪೆ ಮತ್ತು ಬೆಡ್ ಶೀಟ್ ಎಲ್ಲಾ ರಕ್ತವಾಗಿತ್ತು ಎಂದರೆ ಸರಿಯಲ್ಲ. ಆ ಕಾಲಕ್ಕೆ ಕೋರ್ಟ್ ಮುಂದಿರುವ ಆರೋಪಿ ಸಹ ಪಕ್ಕದಲ್ಲಿಯೇ ಇದ್ದು, ಅವನ ತುಟಿಯಿಂದ ರಕ್ತ ಬರುತ್ತಿತ್ತು ಎಂದರೆ ಸರಿಯಲ್ಲ. ನಾನು ಏನೆಂದು ವಿಚಾರ ಮಾಡಿದಾಗ ಆರೋಪಿ ಮತ್ತು ಮುದಾಸಿರ್ ಹಣದ ವಿಚಾರಕ್ಕೆ ಹಾಗೂ

ಮುದಾಸಿರ್ ಸೆಲ್ಯೂಷನ್ ಕೊಡಲಿಲ್ಲ ಎಂಬ ವಿಚಾರಕ್ಕೆ ಜಗಳ ಮಾಡಿಕೊಂಡಿದ್ದು, ಆರೋಪಿ ಸಿಮೆಂಟ್ ಇಟ್ಟಿಗೆಯನ್ನು ಮುದಾಸಿರ್ ನ ಮೇಲೆ ಎತ್ತಿ ಹಾಕಿ ಸಾಯಿಸಿರುವುದಾಗಿ ಗೊತ್ತಾಯಿತು ಎಂದರೆ ಸರಿಯಲ್ಲ. ಆ ಕಾಲಕ್ಕೆ ಮುದಾಸಿರ್ ನ ಮನೆಯವರು ಆರೋಪಿಯನ್ನು ಕಟ್ಟಿ ಹಾಕಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ''ನಮ್ಮ ಏರಿಯಾದವನೇ ಆದ ............... ನನ್ನ ಹೇಳಿಕೆಯನ್ನು ನೀಡಿರುತ್ತೇನೆ '' ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಶಾನೆ ಪಿ–21 ಎಂದು ಗುರುತಿಸಿದೆ. ಈಗ ಆರೋಪಿ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ–**

**5.** ಪಾಟೀ ಸವಾಲು ಆರೋಪಿ ಪರ ಇಲ್ಲ

ಮರುವಿಚಾರಣೆಃ– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಮೈಸೂರು.**